# ಹಾವಿಗೆ ಶೂ ಯಾವಾಗ ಸಿಗುತ್ತೆ?

■ ಬಾದಲ್



ಚಿತ್ರಗಳು: ಶಶಿಧರ್ ಹಳೇಮನಿ

ಒಂದು ಕಾಡಿನಲ್ಲಿ ಒಂದು ದೊಡ್ಡ ಹಾವಿತ್ತು. ಹಾವು ಅಂದರೆ ನಮಗೆಲ್ಲರಿಗೂ ಭಯ ತಾನೇ? ಹಾವು ತನ್ನ ಪಾಡಿಗೆ ತಾನು ಬದುಕಿಕೊಂಡು ಖುಷಿಯಾಗಿತ್ತು.

ಒಂದು ದಿನ ಆ ಹಾವು ಒಂದು ಸುಂದರ ಕನಸನ್ನು ಕಂಡಿತು. ಏನಪ್ಪಾ ಅಂದ್ರೆ, ಕಾಡಿನ ಎಲ್ಲಾ ಪ್ರಾಣಿಗಳಿಗೂ ಕಾಲುಗಳಿದ್ದು, ಎಲ್ಲವೂ ಬಗೆ ಬಗೆ ಶೂ, ಚಪ್ಪಲಿಗಳನ್ನು ಹಾಕಿಕೊಂಡು ಓಡಾಡಿಕೊಂಡು ಖುಷಿಯಾಗಿದ್ದವು. ಅಲ್ಲಿ ಬಣ್ಣ ಬಣ್ಣದ ಶೂಗಳು, ಬಂಗಾರದ ಶೂಗಳು, ವಜ್ರದ ಮಣಿಗಳ ಚಪ್ಪಲಿಗಳು, ಹತ್ತಿಯಲ್ಲಿ ಮಾಡಿದ ಹೂವಿನಂತಹ ಶೂಗಳು, ಚರ್ಮದ ಶೂಗಳು, ತುಪ್ಪಟದ ಚಪ್ಪಲಿಗಳು, ಹೀಗೆ ಬಗೆ ಬಗೆ ಶೂ, ಚಪ್ಪಲಿಗಳಿದ್ದವು. ಇದನ್ನೆಲ್ಲ ಕಂಡ ಹಾವಿಗೆ ತನಗೂ ಕಾಲುಗಳಿದ್ದಿದ್ದರೆ ತಾನೂ ಕೂಡ ಇತರ ಪ್ರಾಣಿಗಳಂತೆ ಶೂ, ಚಪ್ಪಲಿ ಹಾಕಿಕೊಂಡು ಖುಷಿಯಾಗಿರಬಹುದಿತ್ತಲ್ಲ ಎಂದು ಬೇಜಾರಾಯಿತು.



ಬೇಜಾರು ಮಾಡಿಕೊಳ್ಳದೆ ಹೆಂಗಾದರು ಮಾಡಿ ತಾನೂ ಕಾಲುಗಳನ್ನು ಬರಿಸ್ಕೊಳ್ಳಬೇಕು ಎಂದು ಅದೊಂದು ದಿನ ಬೆಟ್ಟದ ತುದಿಗೆ ಹೋಗಿ ಅಲ್ಲಿ ಆಕಾಶದೆತ್ತರ ನಿಂತಿದ್ದ ವೃಕ್ಷದೇವತೆಯನ್ನು ಪ್ರಾರ್ಥಿಸಿತು. ವೃಕ್ಷದೇವತೆ ಪ್ರತ್ಯಕ್ಷಳಾಗಿ ಹಾವಿನ ಕೋರಿಕೆಯನ್ನು ಕೇಳಿಸಿಕೊಂಡಿತು.

‘ಎಲೇ ಹಾವೇ, ನಿನ್ನ ಆಸೆ ಒಪ್ಪಬೇಕಾದ್ದೇ. ಆದರೆ ಈ ಕಾಡಿನಲ್ಲಿ ಎಲ್ಲರಿಗೂ ಅವರ ಒಂದೇ ಒಂದು ಕೋರಿಕೆಯನ್ನು ಮಾತ್ರ ಈಡೇರಿಸುವ ನಿಯಮವಿರುವುದರಿಂದ ನೀನೊಮ್ಮೆ ಯೋಚಿಸುವುದು ಒಳಿತು. ಬಹುತೇಕ ಎಲ್ಲರೂ ಕಷ್ಟಕಾಲ ಬಂದಾಗ ಅದನ್ನು ಪರಿಹರಿಸಿಕೊಳ್ಳುವುದಕ್ಕಾಗಿ ವರವನ್ನು ಉಪಯೋಗಿಸಿಕೊಳ್ಳುತ್ತಾರೆ.